ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ-೧೬೧ Volume-161	ಮೈಸೂರು, ಮಂಗಳವಾರ, ೧೧, ಆಗಸ್ಟ್, ೨೦೨೬ (ಶ್ರಾವಣ, ೨೦, ಶಕವರ್ಷ, ೧೯೪೮) MYSURU, TUESDAY, 11, AUGUST, 2026 (SHRAVANA , 20, SHAKAVARSHA, 1948)	ಸಂಚಿಕೆ-೪೦ Issue –40

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ದೂರವಾಣಿಸಂಖ್ಯೆ: 08172-267345, 265028, 253345 *Website: www.hassan-nic.in*

ಫ್ಯಾಕ್ಸ್‌ಸಂಖ್ಯೆ: 08172 -265418 *E-mail: deo.hassan@gmail.com*

ನಮೂನೆ 1

[ನಿಯಮ 5(1) ನೋಡಿರಿ

ಪ್ರಾಥಮಿಕಅಧಿಸೂಚನೆ

" ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಯಿದೆ, 2013 ರ ಕಲಂ 11(1) ರ ಅಡಿಯಲ್ಲಿ ಮಾಡಿದ ಪ್ರಾಥಮಿಕ ಅಧಿಸೂಚನೆ "

ಕ್ರಮಾಂಕ:ಭೂಸ್ವಾ:245/2020-21 **ದಿನಾಂಕ: 12/06/2026**

ಸಾರ್ವಜನಿಕ ಉದ್ದೇಶಕ್ಕಾಗಿ ಯಗಚಿ ಯೋಜನಾ ಎಡದಂಡೆ ನಾಲೆಯ ವಿತರಣಾ ನಾಲೆ 97ನೇ ಕಿ.ಮೀ ನ ನಾಲಾ ಪಥದಲ್ಲಿ ಬರುವ ವಿತರಣಾ ನಾಲೆ 80 ರ ಕಾಮಗಾರಿ ಉದ್ದೇಶಕ್ಕಾಗಿ ಅವಶ್ಯವಿರುವ ಹಾಸನ ಜಿಲ್ಲೆ,ಹಾಸನ ತಾಲ್ಲೂಕು, ಕಟ್ಟಾಯ ಹೋಬಳಿ,

ಬಾಚೀಹಳ್ಳಿಗ್ರಾಮದಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯು ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ.

ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ:23-07-2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ

ಮತ್ತು ಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019 ದಿನಾಂಕ 2019ರ ಕರ್ನಾಟಕ ಅಧಿನಿಯಮ ಸಂಖ್ಯೆ16)ರ ಕಲಂ-10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ-1 ಮತ್ತು 3 ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸಂಖ್ಯೆ:ಸಂವ್ಯಶಾಇ 03 ಶಾಸನ 2019 ದಿನಾಂಕ:23-07-2019 ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಈ ಅಧಿಸೂಚನೆ ರಾಜ್ಯಪತ್ರದಲ್ಲಿ ದಿನಾಂಕ:23-07-2019 ರಂದು ಪ್ರಕಟವಾಗಿರುತ್ತದೆ

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ-12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ವಿಶೇಷಭೂಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ-2, ಹಾಸನ. ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲೀ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ-11(1) ಮೇರೆಗೆ ಈ ಅಧಿಸೂಚನೆ ಪ್ರಕಟಣೆಗೊಂಡ ದಿನಾಂಕ ದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಭಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ: 30)ರ ಕಲಂ-15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು..

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷಭೂಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ-2,ಹಾಸನ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

:ಅನುಸೂಚಿ:

ಕ್ರ. ಸಂ	ಖಾತೆದಾರರಹೆಸರು (ಪಹಣಿಯಂತೆ)		ಸರ್ವೆ/ಖಾತಾ ನಂಬರ	ಸರ್ವೆ/ಖಾತಾನಂಬರಲ್ಲಿನಒಟ್ಟು ವಿಸ್ತೀರ್ಣ (ಪಹಣಿ/ಉತಾರರನ್ವಯ)		ಸ್ವಾಧೀನಕ್ಕೊಳಪಡುವಒಟ್ಟು ವಿಸ್ತೀರ್ಣ		ತರಹೆ	ಚೆಕ್ಕಬಂದಿ/ಸರಹದ್ದು				ಷರಾ
	ಭೂಮಾಲೀಕರ/ ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ/ ಕೃಷಿಯೇತರ	ಖರಾಬು	ಕೃಷಿ/ ಕೃಷಿಯೇತರ	ಖರಾಬು		ಪೂ	ಪ	ಉ	ದ	
1	2	3	4	5	6	7	8	9	10	11	12	13	14
1	ಕೃಷ್ಣಮೂರ್ತಿ ಬಿನ್ ಸುಬ್ಬೇಗೌಡ	ಕೃಷ್ಣಮೂರ್ತಿಬಿನ್ಸುಬ್ಬೇಗೌಡ	96	2-00	-	0-06	-	ಖುಷ್ಕಿ	ಉಳಿಕೆ	ಉಳಿಕೆ	40/3	46	
2	ಬಿ.ಆರ್ಗಂಗಾಧರ ಬಿನ್ ಲೇ ರಾಮೇಗೌಡ	ಬಿ.ಆರ್ಗಂಗಾಧರಬಿನ್ಲೇ॥ ರಾಮೇಗೌಡ	97	2-00	-	0-05	-	ಖುಷ್ಕಿ	40/4	ಉಳಿಕೆ	39	40/2	
3	ಬಿ.ಬಿಸ್ವಾಮಿಗೌಡ ಬಿನ್ ಬಸಪ್ಪ	ಬಿ.ಬಿಸ್ವಾಮಿಗೌಡಬಿನ್ಬಸಪ್ಪ	98	2-00	-	0-05	-	ಖುಷ್ಕಿ	ಉಳಿಕೆ	ಉಳಿಕೆ	ಸ.ನಂ7	39/2	
4	ಪುಟ್ಟಮ್ಮ ಕೋಂ ಲೇ॥ ಈರಯ್ಯ ಕಾ.ನೀ.ನಿನಿಯಮಿತ	ಪುಟ್ಟಮ್ಮಕೋಂಲೇ॥ ಈರಯ್ಯ ಕಾ.ನೀ.ನಿನಿಯಮಿತ	99	2-00	-	0-06	-	ಖುಷ್ಕಿ	ಸ.ನಂ 13	39/1	ಉಳಿಕೆ	ಉಳಿಕೆ	
5	ಧರ್ಮಪ್ಪ ಬಿನ್ಲೇ॥ ಜವರೇಗೌಡ	ಧರ್ಮಪ್ಪಬಿನ್ಲೇ॥ ಜವರೇಗೌಡ ಕಾ.ನೀ.ನಿನಿಯಮಿತ	100	2-00	-	0-05	-	ಖುಷ್ಕಿ	39	27	ಉಳಿಕೆ	ಉಳಿಕೆ	
6	ಬಿ.ಟಿ ಸುರೇಶ ಬಿನ್ಲೇ॥ ಬಿ.ಎತಿಮ್ಮೇಗೌಡ	ಬಿ.ಟಿಸುರೇಶಬಿನ್ಲೇ॥ ಬಿ.ಎತಿಮ್ಮೇಗೌಡ	101/2	0-18	-	0-06	-	ಖುಷ್ಕಿ	ಉಳಿಕೆ	27	ಉಳಿಕೆ	ಉಳಿಕೆ	
	ಒಟ್ಟು			10-18		0-33							

:ಘೋಷ್ವಾರೆ:

ಹೋಬಳಿ	ಗ್ರಾಮ	ವಿಸ್ತೀರ್ಣ ಎ-ಗು
ಕಟ್ಟಾಯ	ಬಾಚೀಹಳ್ಳಿ	00-33
ಒಟ್ಟು		00-33

ವಿಶೇಷಭೂಸ್ವಾಧೀನಾಧಿಕಾರಿ,
ಹೇಮಾವತಿ ಜಲಾಶಯ ಯೋಜನೆ-2, ಹಾಸನ.

ಜಿಲ್ಲಾಧಿಕಾರಿ,
ಹಾಸನ ಜಿಲ್ಲೆ, ಹಾಸನ.

PR-126

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.
ನಮೂನೆ -5
[ಕರ್ನಾಟಕ ತಿದ್ದುಪಡಿ ನಿಯಮ –5, 20(1) (ಬಿ)]

ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ,ಸೂಕ್ತ ಪರಿಹಾರದ ಹಕ್ಕು ,ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 ರ ಕಲಂ-11(1) ಮೇರೆಗೆ

ಅಧಿಸೂಚನೆ

ಕ್ರ :ಭೂಸ್ವಾ:24/2025-26 ದಿನಾಂಕ:13/07/2026

ಸಾರ್ವಜನಿಕ ಉದ್ದೇಶದ **ಹೊಳೆನರಸೀಪುರ ಜಂಕ್ಷನ್ ನಲ್ಲಿ ಮೈಸೂರು-ಹಾಸನ ಮಾರ್ಗದಲ್ಲಿ ಬರುವ ರೈಲ್ವೆ ಕ್ರಾಸಿಂಗ್ ಆರ್ ಒ ಬಿ LC NO:78 at Km 87/800-900 ನಿರ್ಮಾಣ ಕಾಮಗಾರಿಗೆ ಹೊಳೆನರಸೀಪುರ ಹಾಗೂ ದಕ್ಷಿಣನಾಲಾ** ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳು ಕಾರ್ಯಾಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ಹಾಸನರವರ ಪ್ರಸ್ತಾವನೆ ಮೇರೆಗೆ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು,ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-**2013** (2013 ರ ಕೇಂದ್ರ ಅಧಿನಿಯಮ ಸಂಖ್ಯೆ:30) ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ 23-07-2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು,ಪುನರ್

ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019 (2019 ರ ಕರ್ನಾಟಕ ಅಧಿನಿಯಮ ಸಂಖ್ಯೆ:16) ರ ಕಲಂ-10(ಎ) ರಡಿ ಮೂಲ ಕಾಯ್ದೆಯ ಅಧ್ಯಾಯ–IIIಎ ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸಂಖ್ಯೆ: ಕಂಇ 57 ಎ ಕ್ಯೂ ಹೆಚ್ 2025 ದಿನಾಂಕ 08/05/2026 ರಂದು ಸರ್ಕಾರ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆ ಇ-ಗೆಜೆಟ್/ಕಂಪ್ಯೂಟರ್ ಅಂತರ್ಜಾಲದಲ್ಲಿ ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು,ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013(2013 ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ-12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು ಹಾಸನ ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು,ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013(2013 ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ-11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ ಭೋಗ್ಯಕ್ಕೆ ಅಡವಿಡುವ ಅನುಭವಿಸುವ ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು,ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013(2013 ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ-15(1) ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು ತದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು **ಭೂಸ್ವಾಧೀನಾಧಿಕಾರಿ/ಉಪವಿಭಾಗಾಧಿಕಾರಿ** ಹಾಸನ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

:ಅನುಸೂಚಿ:

ಜಿಲ್ಲೆ: ಹಾಸನ **ತಾಲ್ಲೂಕು:** ಹೊಳೆನರಸೀಪುರ **ಹೋಬಳಿ:** ಕಸಬಾ ಗ್ರಾಮ: ಹೊಳೆನರಸೀಪುರ

ಕ್ರ. ಸಂ	ಖಾತೆದಾರರ ಹೆಸರು (ಪಹಣಿಯಂತೆ)		ಸರ್ವೆ ನಂಬರ್	ಸರ್ವೆನಂಬರ್ ನಲ್ಲಿರುವಒಟ್ಟು ವಿಸ್ತೀರ್ಣ (ಪಹಣಿ/ಉತಾರರನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚೆಕ್ಕಬಂದಿ ಸರಹದ್ದು				ತೋಟಗಾರಿಕಾ ಬೆಳೆ ವಿವರ			ಷರಾ
	ಭೂಮಾಲೀಕರ/ ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ/ಕೃಷಿಯೇತರ	ಖರಾಬು	ಕೃಷಿ/ ಕೃಷಿಯೇತರ	ಖರಾಬು		ಪೂ	ಪ	ಉ	ದ	ಕಟ್ಟಡ/ ನಿವೇಶನ	ಬಾವಿ	ಮರಗಳು	
01	02	03	04	05	06	07	08	09	10	11	12	13				14
01	ಗೌರಮ್ಮ ಕೋಂ ಕೃಷ್ಣಪ್ಪ	ಮಂಜುಳ ಬಿ ಕೋಂ ಲೇ ಹೆಚ್ ಜಿಸತ್ಯನಾರಾಯಣ	94/1	0.00.08	-	0.00.08	-	ಭಾಗಯ್ತು	ಹಳ್ಳ	ಲಾಗು ಹಿಸ್ಸೆ 6	ಲಾಗು ಹಿಸ್ಸೆ 3	ಲಾಗು ಹಿಸ್ಸೆ 11	–	–	–	–
02	ಹೆಚ್ ಆರ್ ಭಗವಾನ್ ಬಿನ್ ರಾಮಣ್ಣ	ಹೆಚ್ ಆರ್ ಭಗವಾನ್ ಬಿನ್ ರಾಮಣ್ಣ	94/2	0.01	–	0.01	–	ಭಾಗಯ್ತು	ಲಾಗು ಹಿಸ್ಸೆ 3	ದಕ್ಷಿಣ ನಾಲಾ ಗಡಿ	ಲಾಗು ಹಿಸ್ಸೆ 13	ಲಾಗು ಹಿಸ್ಸೆ 6	-	-	05 ತೆಂಗಿನ ಮರ	ಪರಿಶೀಲನೆ ಸಮಯದಲ್ಲಿ ತೇಗದ ಮರ ಸ್ಥಳದಲ್ಲಿ ಇರುವುದಿಲ್ಲ
03	ತಿಮ್ಮಯ್ಯ ಬಿನ್ ಲೇಟ್ ಟಿ. ತಿಮ್ಮರಾಯಪ್ಪ	ತಿಮ್ಮಯ್ಯ ಬಿನ್ ಲೇಟ್ ಟಿ. ತಿಮ್ಮರಾಯಪ್ಪ	94/3	0.01	0.01	0.01	0.01	ಭಾಗಯ್ತು	ಹಳ್ಳ	ಲಾಗು ಹಿಸ್ಸೆ 2	ಲಾಗು ಹಿಸ್ಸೆ 7	ಲಾಗು ಹಿಸ್ಸೆ 6 ಮತ್ತು ಲಾಗು ಹಿಸ್ಸೆ 1	-	-	05 ತೆಂಗಿನ ಮರ1 ಅಡಿಕೆ ಮರ	-
04	ಭಾಗ್ಯಮ್ಮ ಕೋಂ ಲೇಟ್ ರಂಗಸ್ವಾಮಿ	ಭಾಗ್ಯಮ್ಮ ಕೋಂ ಲೇಟ್ ರಂಗಸ್ವಾಮಿ	94/5	0.01.08	–	0.01.08	–	ಭಾಗಯ್ತು /ತರಿ	ಲಾಗು ಹಿಸ್ಸೆ 9	ಲಾಗು ಹಿಸ್ಸೆ 8	ಲಾಗುಹಿಸ್ಸೆ 6	ರಸ್ತೆ	-	-	-	-
05	ಮಾಯಮ್ಮ ಕೋಂ ಲೇಟ್ ಗೋವಿಂದಯ್ಯ	ಮಾಯಮ್ಮ ಕೋಂ ಲೇಟ್ ಗೋವಿಂದಯ್ಯ	94/6	0.03	–	0.03	–	ಭಾಗಯ್ತು /ತರಿ	ಲಾಗು ಹಿಸ್ಸೆ 1	ದಕ್ಷಿಣ ನಾಲಾ ಗಡಿ	ಲಾಗು ಹಿಸ್ಸೆ 2 ಮತ್ತು ಲಾಗು ಹಿಸ್ಸೆ 3	ಲಾಗು ಹಿಸ್ಸೆ 5,8,9, 10 ಮತ್ತು ಲಾಗು ಹಿಸ್ಸೆ 12	-	-	13 ತೆಂಗಿನ ಮರ	-

06	ಸಣ್ಣಪ್ಪ ಬಿನ್ ಲೇಟ್ ಕುಚೇಲಯ್ಯ	ಸಣ್ಣಪ್ಪ ಬಿನ್ ಲೇಟ್ ಕುಚೇಲಯ್ಯ	94/8	0.01.08	–	0.01.08	–	ಭಾಗಯ್ತು /ತರಿ	ಲಾಗು ಹಿಸ್ಸೆ 5	ದಕ್ಷಿಣ ನಾಲಾ ಗಡಿ	ಲಾಗು ಹಿಸ್ಸೆ 6	ರಸ್ತೆ	-	-	-	-
07	ಕುಚೇಲಯ್ಯ ಬಿನ್ ಲೇಟ್ ಕುಚೇಲಯ್ಯ	ಕುಚೇಲಯ್ಯ ಬಿನ್ ಲೇಟ್ ಕುಚೇಲಯ್ಯ	94/9	0.01.08	–	0.01.08	–	ಭಾಗಯ್ತು /ತರಿ	ಲಾಗು ಹಿಸ್ಸೆ 10	ಲಾಗು ಹಿಸ್ಸೆ 5	ಲಾಗು ಹಿಸ್ಸೆ 6	ರಸ್ತೆ	0.01.08 ಗುಂಟೆ ಡಾಬಾ ಇರುತ್ತದೆ	-	-	-
08	ಬೆಟ್ಟಪ್ಪ ಬಿನ್ ಲೇಟ್ ಹುಚ್ಚಣ್ಣಯ್ಯ	ಬೆಟ್ಟಪ್ಪ ಬಿನ್ ಲೇಟ್ ಹುಚ್ಚಣ್ಣಯ್ಯ	94/10	0.02	–	0.02	–	ಭಾಗಯ್ತು /ತರಿ	ಲಾಗು ಹಿಸ್ಸೆ 12	ಲಾಗು ಹಿಸ್ಸೆ 9	ಲಾಗು ಹಿಸ್ಸೆ 6	ರಸ್ತೆ	0.02 ಗುಂಟೆ ಜಾಗದಲ್ಲಿ ಟೀ ಅಂಗಡಿ ಇರುತ್ತದೆ.	-	20 ಅಡಿಕೆ 01 ಗಸಗಸೆ ಮರ 5 ತೆಂಗಿನ ಮರ	-
09	ಲಕ್ಷ್ಮಣ ಬಿನ್ ಹುಚ್ಚಪ್ಪ ಉ.ಹುಚ್ಚಣ್ಣಯ್ಯ	ಲಕ್ಷ್ಮಣ ಬಿನ್ ಹುಚ್ಚಪ್ಪ ಉ.ಹುಚ್ಚಣ್ಣಯ್ಯ	94/11	0.0.12	–	0.0.12	–	ಬಾಗಯ್ತು /ತರಿ	ಹಳ್ಳ	ಲಾಗು ಹಿಸ್ಸೆ 12	ಲಾಗು ಹಿಸ್ಸೆ 1	ರಸ್ತೆ	-	-	7 ಅಡಿ ಎತ್ತರ 4 ತೆಂಗಿನ ಮರ	ಪರೀಶೀಲನೆ ಸಮಯದಲ್ಲಿ ಆಲದ ಮರ ಇರುವುದಿಲ್ಲ.
10	ಬಿವಿ ತಾರೇಶ್ ಬಿನ್ ಹೆಚ್ ವೆಂಕಟೇಗೌಡ	ಬಿವಿ ತಾರೇಶ್ ಬಿನ್ ಹೆಚ್ ವೆಂಕಟೇಗೌಡ	94/12	0.01.12	–	0.01.12	–	ಬಾಗಯ್ತು /ತರಿ	ಲಾಗು ಹಿಸ್ಸೆ 11	ಲಾಗು ಹಿಸ್ಸೆ 10	ಲಾಗು ಹಿಸ್ಸೆ 6	ರಸ್ತೆ	-	-	4 ತೆಂಗಿನ ಮರ 7 ಅಡಿಕೆ	-
11	ಸಿದ್ಧಮ್ಮ ಕೋಂ ಜವರಪ್ಪ	ಸಿದ್ಧಮ್ಮ ಕೋಂ ಜವರಪ್ಪ	106/2	0.01.08	–	0.01.08	–	ಬಾಗಯ್ತು /ತರಿ	ದಕ್ಷಿಣ ನಾಲಾ ಗಡಿ	ಹಳ್ಳ	ಲಾಗು ಹಿಸ್ಸೆ 3 ಮತ್ತು 1	ರಸ್ತೆ	-	-	-	-
	ರಾಜೇಗೌಡ ಬಿನ್ ಜವರೇಗೌಡ ಉ.ಜವರಪ್ಪ	ರಾಜೇಗೌಡ ಬಿನ್ ಜವರೇಗೌಡ ಉ.ಜವರಪ್ಪ		0.01.08	–	0.01.08	–									
12	ದೇವಿರಮ್ಮ ಕೋಂ ಲೇಟ್ ನಂಜೇಗೌಡ	ದೇವಿರಮ್ಮ ಕೋಂ ಲೇಟ್ ನಂಜೇಗೌಡ	107	0.13	–	0.03	-	ಬಾಗಾಯ್ತು ತರಿ	ದಕ್ಷಿಣ ನಾಲಾ ಗಡಿ	ಹಳ್ಳ	ರಸ್ತೆ	ಉಳಿಕೆ ಜಾಗ	ಮನೆ ಕಾಂಪೌಡ್	–	–	-
ಒಟ್ಟು						**0. 20.08**										

ಗ್ರಾಮ: ದಕ್ಷಿಣ ನಾಲಾ																
13	ಕೇಶವಯ್ಯ ಬಿನ್ ಚಂದ್ರಾಯಪ್ಪ	ಕೇಶವಯ್ಯ ಬಿನ್ ಚಂದ್ರಾಯಪ್ಪ	268/2	0.24	–	0.04.08	–	ಬಾಗಾಯ್ತು/ತರಿ	ಉಳಿಕೆ	ಹೆಚ್ ಎನ್ ಪಿ ಗಡಿ	ಉಳಿಕೆ	ರಸ್ತೆ	ಶಾಲಾಕಟ್ಟಡ	–	–	ಅನ್ಯ ಸಂಕ್ರಮಣ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ WP:34297/12 & ಇತರೆ ಆದೇಶ ದಿ:28/03/2014 ಆದೇಶದಂತೆ (2)RRT(V)46/14-15 ದಿ:15/10/2024 ರ ಆದೇಶದಂತೆ
				ಒಟ್ಟು		**0.04.08**										

:ಘೋಷ್ವಾರೆ:

ಕ್ರ	ಗ್ರಾಮ	ತರಹೆ	ವಿಸ್ತೀರ್ಣ
01	ಹೊಳೆನರಸೀಪುರ	ಬಾಗಾಯ್ತು/ತರಿ	0.20.08
02	ದಕ್ಷಿಣನಾಲಾ	ಬಾಗಾಯ್ತು/ತರಿ	0.04.08
ಒಟ್ಟು			**0.25**

ಜಗದೀಶ ಗಂಗಣ್ಣವರ ಕೆ,ಎ,ಎಸ್
ಉಪವಿಭಾಗಾಧಿಕಾರಿ ಮತ್ತು ಭೂಸ್ವಾಧೀನಾಧಿಕಾರಿ
ಹಾಸನ ಉಪವಿಭಾಗ, ಹಾಸನ.

ಶ್ರೀಮತಿ ಕೆ ಎಸ್ ಲತಾಕುಮಾರಿ ಐ,ಎ,ಎಸ್
ಜಿಲ್ಲಾಧಿಕಾರಿಗಳು
ಹಾಸನ ಜಿಲ್ಲೆ, ಹಾಸನ

PR-127

ಜಿಲ್ಲಾಧಿಕಾರಿಗಳು,ಚಿಕ್ಕಮಗಳೂರು ಜಿಲ್ಲೆ,,ಚಿಕ್ಕಮಗಳೂರು ರವರ ಕಛೇರಿ ನಡವಳಿಗಳು

ವಿಷಯ: **ಕರ್ನಾಟಕ ಭೂಮಂಜೂರಾತಿ ನಿಯಮಗಳು-1969 ರ ನಿಯಮ-28(ಎ) ರಡಿ ಪಥ ಬದಲಾವಣೆ.**

ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ-ನೆಲ್ಲೂರು ಗ್ರಾಮದ ಗಡಿಗೆ ಹೊಂದಿಕೊಂಡಿರುವ ಒಟ್ಟು 1-10 ಎಕರೆ ಬಿ ಖರಾಬು ಹದ್ದಿಗಿಡದ ಹಳ್ಳವನ್ನು ಸಾರ್ವಜನಿಕ ಹಕ್ಕಿನಿಂದ ವಿರಹಿತಗೊಳಿಸಿ, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ನೆಲ್ಲೂರು ಗ್ರಾಮದ ಸ ನಂ 102 ರಲ್ಲಿ 03-33 ಎಕರೆ ಹಿಡುವಳಿ ಜಮೀನಿನ ಕೆಳಭಾಗದ 1-10 ಎಕರೆ ಪ್ರದೇಶವನ್ನು ಹದ್ದಿಗಿಡದ ಹಳ್ಳಕ್ಕೆ ಕರ್ನಾಟಕ ಭೂಮಂಜೂರಾತಿ ನಿಯಮ ಗಳು-1969 ರ ನಿಯಮ-28(ಎ) ರಡಿ ಪಥ ಬದಲಾವಣೆ ಮಾಡುವ ಬಗ್ಗೆ.

ಉಲ್ಲೇಖ:

1. ಸರ್ಕಾರದ ಪತ್ರದ ಸಂಖ್ಯೆ:ಆರ್‌ಡಿ/6/ಎಲ್‌ಜಿಯು 2025 ದಿನಾಂಕ: 27/01/2026.
2. ಉಪವಿಭಾಗಾಧಿಕಾರಿ ಚಿಕ್ಕಮಗಳೂರುರವರ ಪತ್ರದ ಸಂಖ್ಯೆ:LND/CR/14012/56/2025 (E-923496) ದಿನಾಂಕ:31/07/2025 & LND/CR/14012/56/2025(E-923496) ದಿನಾಂಕ: 07/07/2026
3. ತಹಶೀಲ್ದಾರ್ ಚಿಕ್ಕಮಗಳೂರುರವರ ಪತ್ರದ ಸಂಖ್ಯೆ:TAHCKM-ADMNOMIS/421/2024 ADMN-TALUKOFFICECHIKKAM(620422) ದಿನಾಂಕ:31/07/2025 & TAHCKM-ADM N0MISC/421/2024-ADMN- 620422, ದಿನಾಂಕ:09-06-2026
4. ಶ್ರೀಮತಿ ವಾಸಂತಿ ಹೆಗಡೆ ಕೋಂ ಗಂಗಯ್ಯ ಹೆಗಡೆರವರ ಪರವಾಗಿ ಜಿಪಿಎ ಹೋಲ್ಡರ್ ಪ್ರಸಾದ್ ಹೆಚ್ ಜಿ, ಚಿಕ್ಕಮಗಳೂರು ರವರ ಮನವಿ ದಿನಾಂಕ:24/09/2024.

******

ಪ್ರಸ್ತಾವನೆ:

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ನೆಲ್ಲೂರು ಗ್ರಾಮದ ಸ ನಂ 102 ರಲ್ಲಿ 3-33 ಎಕರೆ ಜಮೀನು ಕ್ರಯಕ್ಕೆ ಕೊಂಡುಕೊಂಡಿದ್ದು, ಸದರಿ ಜಮೀನಿನ ಮಧ್ಯ ಭಾಗದಲ್ಲಿ ಚಿಕ್ಕದಾದ ಕಾಲುವೆ ಹರಿದು ದಾಟಿ ಯಗಚಿ ನದಿಗೆ ಸೇರುತ್ತಿದ್ದು, ಸದರಿ ಹಳ್ಳವು ದಿನಾಂಕ:26/10/1997ರಲ್ಲಿ ಬಿದ್ದ ಅತಿ ಹೆಚ್ಚಿನ ಮಳೆಯಿಂದಾಗಿ ಉಂಟಾದ ಪ್ರವಾಹದಿಂದ ನೀರಿನ ಪಥವು ಬದಲಾವಣೆಯಾಗಿದ್ದು, ಇದರಿಂದಾಗಿ ಹಳ್ಳದ ಅಕ್ಕಪಕ್ಕದ ವಾಸಿಗಳ ಮನೆಗಳಿಗೆ ಹಾಗೂ ಎ.ಬಿ.ಸಿ ಸಂಸ್ಥೆಯ ಕಛೇರಿಯ ಕಟ್ಟಡಕ್ಕೆ ಕೂಡ ಹಾನಿಯುಂಟಾಗಿರುತ್ತದೆಂದು, ಈ ಬಗ್ಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಉಪವಿಭಾಗ ರವರು ಸ್ಥಳ ಪರಿಶೀಲಿಸಿ, ಮಧ್ಯ ಭಾಗದಿಂದ ನೀರಿನ ಪಥ ಸಂಚಲನ ಮಾಡಿ ಜಮೀನಿನ ಕೊನೆ ಭಾಗದಲ್ಲಿ ಹರಿಯುತ್ತಿರುವ ಹಳ್ಳದ ಅಂಚನ್ನು ಅಗಲ ಮಾಡಿ ಮತ್ತು ಆಳವನ್ನು ಹೆಚ್ಚಿಸಲು ತಿಳಿಸಿದ ಮೇರೆ ಸದರಿ ಕಾಲುವೆ ಕಾಮಗಾರಿಯನ್ನು ಎ.ಬಿ.ಸಿ ಸಂಸ್ಥೆಯವತಿಯಿಂದ ನಿರ್ಮಿಸಿ ಸಾರ್ವಜನಿಕರಿಗೆ ಹಾಗೂ ಅಲ್ಲಿನ ವಾಸಿಗಳಿಗೆ ತೊಂದರೆಯಾಗದಂತೆ ಕಾಮಗಾರಿಯನ್ನು ಮಾಡಲಾಗಿರುತ್ತದೆಂದು ಅಲ್ಲದೇ, ನಗರ ಗ್ರಾಮಾಂತರ ಯೋಜನೆ ಇಲಾಖೆಯಿಂದ ಅನುಮೋದಿಸಲಾಗಿರುವ ನಕ್ಷೆಯಲ್ಲಿಯು ಕೂಡ ಹಳ್ಳದ ಪಥಬದಲಾವಣೆ ಮಾಡಲಾಗಿರುತ್ತದೆಂದು ಪ್ರಸ್ತುತ ನಕ್ಷೆಯಂತೆ ಪಥಬದಲಾವಣೆ ಮಾಡಿಕೊಡಲು ಕೋರಿ ಉಲ್ಲೇಖ(4)ರಂತೆ ಶ್ರೀಮತಿ ವಾಸಂತಿ ಹೆಗಡೆ ಕೋಂ ಗಂಗಯ್ಯ ಹೆಗಡೆರವರ ಪರವಾಗಿ ಜಿ.ಪಿ.ಎ ಹೋಲ್ಡರ್ ಪ್ರಸಾದ್ ಹೆಚ್ ಜಿ, ಚಿಕ್ಕಮಗಳೂರುರವರು ಮನವಿ ಸಲ್ಲಿಸಿರುತ್ತಾರೆ.

ಅದರಂತೆ, ಈ ಬಗ್ಗೆ ಪರಿಶೀಲಿಸಿ, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ನಲ್ಲೂರು ಗ್ರಾಮದ ಸ.ನಂ 102ರಲ್ಲಿ3-33 ಎಕರೆ ಶ್ರೀಮತಿ ವಾಸಂತಿ ಹೆಗಡೆ ಕೋಂ ಗಂಗಯ್ಯಹೆಗಡೆ ರವರಿಗೆ ಸೇರಿದ ಜಮೀನಾಗಿದ್ದು, ಪಥಬದಲಾವಣೆ ಸಂಬಂಧ ಸರ್ವೆ ನಕ್ಷೆ ತಯಾರಿಸಲಾಗಿದೆ ಎಂದು ಆಕಾರ ಬಂದ್ ಮತ್ತು ಪಹಣಿ ವಿಸ್ತೀರ್ಣಕ್ಕೆ ತಾಳೆ ಇದ್ದು, ಪ್ರಸ್ತುತ ಪಥಬದಲಾವಣೆ ಮಾಡುವ ಕುರಿತು ತಯಾರಿಸಿರುವ ನಕ್ಷೆಯಂತೆ ಹದ್ದಿಗಿಡದ ಹಳ್ಳ 1-10 ಎಕರೆ ಪ್ರಸ್ತುತ ಸ್ಥಳದಲ್ಲಿರುವುದಿಲ್ಲವೆಂದು, ಭೌತಿಕವಾಗಿ ಹರಿಯುತ್ತಿರುವ ಹಳ್ಳವು 0-15 ಗುಂಟೆ ಇದ್ದು, ಸದರಿ ಹಳ್ಳಕ್ಕೆ ಹೊಂದಿಕೊಂಡಂತೆ 0-35 ಗುಂಟೆ ಜಮೀನು ಸೇರಿ ಹದ್ದಿಗಿಡದ ಹಳ್ಳ ಒಟ್ಟು 1-10 ಎಕರೆ ಪ್ರದೇಶವನ್ನು ಬಿಟ್ಟುಕೊಡಲು ಒಪ್ಪಿಗೆ ಸೂಚಿಸಿರುವರೆಂದು ಹಾಗೂ ಪ್ರಸ್ತಾಪಿತ ಹದ್ದಿಗಿಡದ ಹಳ್ಳದ ಪಥಬದಲಾವಣೆ ಮಾಡುವ ಕುರಿತು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ:04/03/2026 ರಿಂದ 90ದಿನಗಳ ವರೆಗೆ

ಪ್ರಚುರಪಡಿಸಲಾಗಿದ್ದು, ಈ ಕುರಿತು ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲವೆಂದು ಪ್ರಸ್ತುತ ಪಥಬದಲಾವಣೆ ಮಾಡುವ ಸಂಬಂಧತಯಾರಿಸಿರುವ ನಕ್ಷೆಯಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು-1969 ರ ನಿಯಮ-28(ಎ) ರಡಿ ಪಥಬದಲಾವಣೆ ಮಾಡಬಹುದಾಗಿರುತ್ತದೆ ಎಂದು ಸ್ಥಳೀಯ ಅಧಿಕಾರಿಗಳಾದ ಉಪವಿಭಾಗಾಧಿಕಾರಿ ಚಿಕ್ಕಮಗಳೂರು ಕಂದಾಯ ಉಪವಿಭಾಗ ಚಿಕ್ಕಮಗಳೂರು ಹಾಗೂ ತಹಶೀಲ್ದಾರ್ ಚಿಕ್ಕಮಗಳೂರು ತಾಲ್ಲೂಕು ಚಿಕ್ಕಮಗಳೂರು ರವರು ಉಲ್ಲೇಖ (2) ಮತ್ತು (3) ರಲ್ಲಿ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ನೆಲ್ಲೂರು ಗ್ರಾಮದ ಸ.ನಂ 102 ರಲ್ಲಿ ಶ್ರೀಮತಿ ವಾಸಂತಿ ಹೆಗಡೆ ಇತ್ತಿಚಿನ ಪಹಣಿ ದಾಖಲೆಯಂತೆ ಈ ಕೆಳಗಿನಂತೆ ಜಮೀನಿರುತ್ತದೆ.

ಕ್ರ.ಸಂ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ. ಗುಂ)	ಸ್ವಾಧೀನದಾರರ ವಿವರ
01	ಚಿಕ್ಕಮಗಳೂರು	ಕಸಬಾ	ನೆಲ್ಲೂರು	102	0-10 0-20 0-13 0-20 0-10 1-00 0-10	ಶ್ರೀಮತಿ ವಾಸಂತಿ ಹೆಗಡೆ ಕೋಂ ಗಂಗಯ್ಯ ಹೆಗಡೆ
02	ಚಿಕ್ಕಮಗಳೂರು	ಕಸಬಾ	ನೆಲ್ಲೂರು	102	0-30	ಶ್ರೀಮತಿ ವಾಸಂತಿ ಹೆಗಡೆ ಕೋಂ ಗಂಗಯ್ಯ ಹೆಗಡೆ
				ಒಟ್ಟು	3-33	

ಈ ಮೇಲ್ಕಂಡಂತೆ ಜಮೀನುಗಳು ಸಬ್ ರಿಜಿಸ್ಟರ್ ನೊಂದಣಿ ಮೂಲಕ ಖಾತೆದಾರರು ಕ್ರಯಕ್ಕೆ ಪಡೆದಿದ್ದು, ಎಂ ಆರ್ ನಂ:12/96-97, ಎಂ ಆರ್ ನಂ:29/2001-02 ಮತ್ತು ಎಂ ಆರ್ ನಂ:T8/24-25ರಂತೆ ಹಕ್ಕು ಬದಲಾವಣೆಯಾಗಿರುತ್ತದೆ, ಪ್ರಸ್ತುತ ಈ ಮೇಲಿನಂತೆ ಖಾತೆ/ಪಹಣಿ ದಾಖಲಾಗಿರುತ್ತದೆ.

ಮುಂದುವರೆದು, ಈ ಮೇಲಿನಂತೆ ಜಮೀನುಗಳ ಪೈಕಿ ಸ.ನಂ 102 ರಲ್ಲಿ ಈ ಕೆಳಗಿನಂತೆ ಜಮೀನುಗಳು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಶ್ರೀಮತಿ ವಾಸಂತಿ ಹೆಗಡೆ ಕೋಂ ಗಂಗಯ್ಯ ಹೆಗಡೆ ಎಂಬುವವರ ಹೆಸರಿಗೆ ಭೂಪರಿವರ್ತನೆಯಾಗಿದ್ದು, ಸಂಖ್ಯೆ:A2ALN:CR:17/2009-10 ದಿನಾಂಕ:13/10/2010ರಂತೆ ಆದೇಶ ಹೊರಡಿಸಲಾಗಿರುತ್ತದೆ.

ಕ್ರ.ಸಂ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ. ಗುಂ)	ಸ್ವಾಧೀನದಾರರ ವಿವರ
01	ಚಿಕ್ಕಮಗಳೂರು	ಕಸಬಾ	ನೆಲ್ಲೂರು	102	0-10 0-20 0-13 0-20 0-10 1-00 0-10	ಶ್ರೀಮತಿ ವಾಸಂತಿ ಹೆಗಡೆ ಕೋಂ ಗಂಗಯ್ಯ ಹೆಗಡೆ
				ಒಟ್ಟು	3-03	

ಅಲ್ಲದೇ, ಪ್ರಸ್ತಾಪಿತ ಜಮೀನಿನ ಆಕಾರ್ ಬಂದ್ ದಾಖಲೆ ಪರಿಶೀಲಿಸಲಾಗಿ ಸ.ನಂ 102 ರಲ್ಲಿ ಒಟ್ಟು 3-33 ಎಕರೆ ಈ ಪೈಕಿ "ಅ" ಮತ್ತು "ಬ" ಖರಾಬ್ ಇಲ್ಲ, ಜಾತ 3-33 ಎಕರೆ ಇದ್ದು, ತರಿ ಜಮೀನಾಗಿರುತ್ತದೆ, ಹಳ್ಳದ ಬಗ್ಗೆ ಯಾವುದೇ ಖರಾಬ್ ಇರುವುದಿಲ್ಲ. ಅಲ್ಲದೇ ಪ್ರಸ್ತಾಪಿತ ಟಿಪ್ಪಣಿ ದಾಖಲೆಯಲ್ಲಿಯೂ ಕೂಡ ಖರಾಬ್ ಬಗ್ಗೆ ದಾಖಲಿರುವುದು ಕಂಡುಬಂದಿರುವುದಿಲ್ಲ.

ಮುಂದುವರೆದು, ಪ್ರಸ್ತಾಪಿತ ಗ್ರಾಮದ ಗ್ರಾಮನಕಾಶೆ ಪರಿಶೀಲಿಸಲಾಗಿ, ಸದರಿ ಹದ್ದಿಗಿಡದ ಹಳ್ಳವು ಇಂದಾವರ-ನೆಲ್ಲೂರು ಗ್ರಾಮದ ಗಡಿಗೆ ಹೊಂದಿಕೊಂಡಿದ್ದು, ಗ್ರಾಮ ನಕ್ಷೆಯಂತೆ ಸ.ನಂ 102 ರ ಮೇಲ್ಭಾಗದಲ್ಲಿ ಹಾದುಹೋಗಿರುವುದು ಕಂಡುಬರುತ್ತದೆ.

ಆದರೆ ಪ್ರಸ್ತುತ ಭೂಮಾಪಕರು ತಯಾರಿಸಿರುವ ನಕ್ಷೆಯಂತೆ ಹದ್ದಿಗಿಡದ ಹಳ್ಳವು ಭೌತಿಕವಾಗಿ 00-15 ಗುಂಟೆ ಇದ್ದು, ಜಮೀನಿನ ಕೆಳಭಾಗದ ಹಂಚಿನಲ್ಲಿ ಹಾದುಹೋಗಿರುತ್ತದೆ. ಈ ಜಮೀನಿಗೆ ಹೊಂದಿಕೊಂಡಂತೆ ಒಟ್ಟು 0-35 ಗುಂಟೆ ಜಮೀನನ್ನು ಪಥಬದಲಾವಣೆಗೆ ಬಿಟ್ಟುಕೊಡಲು ನಕ್ಷೆ ತಯಾರಿಸಿದ್ದು, ಈ ರೀತಿ ಒಟ್ಟು 1-10 ಎಕರೆ ಜಮೀನಿನಲ್ಲಿ ಪಥಬದಲಾವಣೆಗೆ ಮಾಡಬೇಕಿರುತ್ತದೆ. ಪಥ ಬದಲಾವಣೆ ಮಾಡಿಕೊಟ್ಟಲ್ಲಿ ಪ್ರಸ್ತಾಪಿತ ಸ.ನಂ.102 ರಲ್ಲಿ 01-10 ಎಕರೆ ಹಿಡುವಳಿ ಜಮೀನನ್ನು ಹದ್ದಿಗಿಡದ ಹಳ್ಳ ಉದ್ದೇಶಕ್ಕೆ ಮೀಸಲಿರಿಸಿ ಸರ್ಕಾರಕ್ಕೆ ಹಸ್ತಾಂತರಿಸುವುದಾಗಿ ಪಥಬದಲಾವಣೆ ನಕ್ಷೆಯೊಂದಿಗೆ ಖಾತೆದಾರರು ಒಪ್ಪಿ ನೀಡಲಾಗಿದ್ದು, ಸದರಿ ಹಿಡುವಳಿ ಜಮೀನನ್ನು ಸರ್ಕಾರಕ್ಕೆ ಹಸ್ತಾಂತರಿಸಿಕೊಂಡು **ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-68 ರಡಿ ಹಾಗೂ ಕರ್ನಾಟಕ ಭೂಮಂಜೂರಾತಿ ನಿಯಮಗಳು-1969ರ ನಿಯಮ-28(ಎ)ರಡಿ ಪ್ರಸ್ತಾಪಿತ ಜಮೀನಿನಲ್ಲಿರುವ ಹದ್ದಿಗಿಡದ ಹಳ್ಳದ ಒಟ್ಟು 01-10 ಎಕರೆ "ಬಿ" ಖರಾಬು ಜಮೀನಿನ ಪಥ ಬದಲಾವಣೆ ಮಾಡುವ ಕುರಿತು ನಿಯಮಾನುಸಾರ ಕ್ರಮವಹಿಸಲು ಸರ್ಕಾರದ ಪೂರ್ವಾನುಮೋದನೆ ಕೋರಲಾಗಿತ್ತು.**

ಅದರಂತೆ, ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ನೆಲ್ಲೂರು ಗ್ರಾಮದ ಸ.ನಂ 102ರಲ್ಲಿ3-33 ಎಕರೆ ಜಮೀನಿನ ಪೈಕಿ 01-10 ಎಕರೆ ಜಮೀನನ್ನು ಸರ್ಕಾರಕ್ಕೆ ಹಸ್ತಾಂತರಿಸಿಕೊಂಡು ಇಂದಾವರ-ನೆಲ್ಲೂರು ಗ್ರಾಮದ ಗಡಿಗೆ ಹೊಂದಿಕೊಂಡಿರುವ ಜಮೀನಿನಲ್ಲಿ ಇರುವ ಹದ್ದಿಗಿಡದ ಹಳ್ಳದ ಒಟ್ಟು 01-10 ಎಕರೆ "ಬಿ" ಖರಾಬು ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ-1964 ರ ಕಲಂ-68(1) ರಿಂದ 68(5)ರವರೆಗಿನಂತೆ ಕ್ರಮವಹಿಸಿ ಸಾರ್ವಜನಿಕ ಹಕ್ಕಿನಿಂದ ವಿರಹಿತಗೊಳಿಸಿದ ನಂತರ ಕರ್ನಾಟಕ ಭೂಮಂಜೂರಾತಿ ನಿಯಮಗಳು-1969 ರ ನಿಯಮ-28(ಎ) ಪ್ರಕಾರ ಪಥ ಬದಲಾವಣೆ ಮಾಡಲು ಉಲ್ಲೇಖ(1)ರಂತೆ ಸರ್ಕಾರವು ಪೂರ್ವಾನುಮತಿಯನ್ನು ನೀಡಿರುತ್ತದೆ.

ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-68 ರಲ್ಲಿ ಈ ಕೆಳಗಿನಂತೆ ವಿವರಿಸಲಾಗಿದೆ.

- **ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿರದಂತ ಸಾರ್ವಜನಿಕ ರಸ್ತೆ,ಬೀದಿ, ಓಣಿ ಅಥವಾ ಹಾದಿ ಇವುಗಳಲ್ಲಿ ಅಥವಾ ಇವುಗಳ ಮೇಲೆ ಸಾರ್ವಜನಿಕರಿಗೆ ಮತ್ತು ವ್ಯಕ್ತಿಗಳಿಗೆ ಇರುವ ಹಕ್ಕುಗಳ ಅಳಿಯುವಿಕೆ;-**
- " (1) ರಾಜ್ಯ ಸರ್ಕಾರದ ಸ್ವತ್ತಾಗಿರುವ ಯಾವುದೇ ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ ಹಾದಿ ಇವುಗಳು ಪೂರ್ತಿಯಾಗಿ ಅಥವಾ ಭಾಗಶಃ ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಾಗಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದಾಗ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಹಾಗೆಂದು ಘೋಷಿಸಬಹುದು ಮತ್ತು ಸಂಧರ್ಭಾನುಸಾರ ಅಂಥ ಯಾವುದೇ ರಸ್ತೆ, ಬೀದಿ ಓಣಿ ಅಥವಾ ಹಾದಿಅಥವಾ ಅವುಗಳ ಯಾವುದೇ ಭಾಗದಲ್ಲಿ ಅಥವಾ ಅವುಗಳ ಮೇಲೆ ಇರುವ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಅಳಿದು ಹೋಗತಕ್ಕದೆಂದು ಪ್ರಸ್ತಾಪಿಸಲಾಗಿದೆಯೆಂದು ಆ ಘೋಷಣೆಯಲ್ಲಿ ನಿರೂಪಿಸತಕ್ಕದ್ದು,
- ಅಂಥ ಅಧಿಸೂಚನೆಯು ಪ್ರಕಟವಾದ ಮೇಲೆ ಜಿಲ್ಲಾಧಿಕಾರಿಯು ಸಾಧ್ಯವಾದಷ್ಟು ಬೇಗನೆ ಅಂಥ ಘೋಷಣೆಯ ಬಗ್ಗೆ ಸಾರ್ವಜನಿಕ ನೋಟಿಸನ್ನು ಸಂಧರ್ಭಾನುಸಾರ ಅಂಥ ರಸ್ತೆ, ಬೀದಿ, ಓಣಿ ಅಥವಾ ಹಾದಿ ಅಥವಾ ಅವುಗಳ ಭಾಗದ ಮೇಲೆ ಅಥವಾ ಅವುಗಳ ಸಮೀಪದಲ್ಲಿನ ಅನುಕೂಲ ವಾದ

ಸ್ಥಳಗಳಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು.ಅಂಥ ಘೋಷಣೆಯಲ್ಲಿ ಮತ್ತು ನೋಟಿಸನ್ನು ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ ಅಂಥ ರಸ್ತೆ, ಬೀದಿ, ಓಣಿ ಅಥವಾ ಅವುಗಳ ಜಾಗವು ಇರುವ ಸ್ಥಳವನ್ನು ಮತ್ತು ಅವುಗಳ ಪರಿಮಿತಿಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಪ್ರಸ್ತಾಪಗಳಿಗೆ ಆಕ್ಷೇಪಣೆಗಳೇನಾದರೂ ಇದ್ದರೆ ತಿಳಿಸಬೇಕೆಂದು ಕೇಳತಕ್ಕದ್ದು.

- (5) ಉಪ-ಪ್ರಕರಣ(4)ರ ಮೇರೆಗೆ ಮಾಡಿದ ವ್ಯವಹರಣೆಗಳ ದಾಖಲೆಯನ್ನು ಮತ್ತು ವರದಿ ಏನಾದರೂ ಇದ್ದರೆ, ಅದನ್ನು ಪರಿಗಣಿಸಿದ ನಂತರ ಉಪ-ಪ್ರಕರಣ(1)ರ ಮೇರೆಗಿನ ಅಧಿಸೂಚನೆ ಯಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ ಹಾದಿ ಅಥವಾ ಅವುಗಳ ಭಾಗಗಳು ಸಾರ್ವಜನಿಕ ಉಪಯೋಗಕ್ಕಾಗಿ ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅಂಥ ರಸ್ತೆ, ಬೀದಿ, ಓಣಿ ಅಥವಾ ಹಾದಿಗಳಲ್ಲಿ ಅಥವಾ ಅವುಗಳ ಭಾಗಗಳಲ್ಲಿ ಅಥವಾ ಅವುಗಳ ಮೇಲೆ ಇರುವ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಎಲ್ಲಾ ಹಕ್ಕುಗಳು ಅಳಿದು ಹೋಗಿದೆಯೆಂದು ಒಂದು ಘೋಷಣೆಯನ್ನು ಸರ್ಕಾರಿ ಗೆಜೆಟ್‌ನಲ್ಲಿ (ರಾಜ್ಯಪತ್ರದಲ್ಲಿ)ಪ್ರಕಟಿಸ ತಕ್ಕದ್ದು ಮತ್ತು ಆ ತರುವಾಯ ಅಂಥ ಎಲ್ಲಾ ಹಕ್ಕುಗಳು ಅಳಿದು ಹೋಗತಕ್ಕದ್ದು ಮತ್ತು ಅಂಥ ಘೋಷಣೆಯ ದಿನಾಂಕದಿಂದ ಅಂಥ, ರಸ್ತೆ, ಬೀದಿ, ಓಣಿ ಅಥವಾ ಹಾದಿ ಅಥವಾ ಅವುಗಳ ಭಾಗಗಳು ರಾಜ್ಯ ಸರ್ಕಾರದ ವಿಲೇ ಮಾಡುವ ಅಧಿಕಾರಕ್ಕೊಳಪಟ್ಟಿರತಕ್ಕದ್ದು" ಎಂಬುದಾಗಿದೆ.

ಅಲ್ಲದೇ, **ಕರ್ನಾಟಕ ಭೂಮಂಜೂರಾತಿ ನಿಯಮಗಳು-1969 ರ ನಿಯಮ-28-ಎ** ರಲ್ಲಿ ಈ ಕೆಳಗಿನಂತೆ ವಿವರಿಸಲಾಗಿದೆ.

- (1)ಈ ನಿಯಮಗಳಲ್ಲಿ ಏನೇ ಇದ್ದರೂ, **ಯಾವನೇ ವ್ಯಕ್ತಿಯು ರಾಜ್ಯ ಸರ್ಕಾರಕ್ಕೆ ಭೂಮಿಯನ್ನು ಬಿಟ್ಟು ಕೊಟ್ಟಿದ್ದರೆ ಈ ಕೆಳಗಿನ ಸಂಧರ್ಭಗಳಲ್ಲಿ ಅಂಥ ವ್ಯಕ್ತಿಗೆ ಭೂಮಿಯನ್ನು ಮಂಜೂರು ಮಾಡ ಬಹುದೆಂದು** ಅಂದರೆ.-
- (i)ಮಾರ್ಗ ಬದಲಾವಣೆಯಿಂದಾಗಿ ಒಂದು ಖಾಸಗಿ ಭೂಮಿಯ ಮೂಲಕ ನದಿ, ಜಲಮಾರ್ಗ ಅಥವಾ ಗಾಡಿದಾರಿಯು ಹಾದುಹೋದರೆ:
- ಪರಂತು, ಪ್ರತಿಯಾಗಿ ಮಂಜೂರು ಮಾಡಬೇಕಾದ ಭೂಮಿಯು ರೆವಿನ್ಯೂ ದಾಖಲೆಗಳಲ್ಲಿ ನದಿ, ಜಲಮಾರ್ಗ ಅಥವಾ ಗಾಡಿದಾರಿಯೆಂದು ನೊಂದಾಯಿತವಾದ ಭೂಮಿಯಾಗಿರತಕ್ಕದ್ದು ಎಂಬುದಾಗಿದೆ.
- (ii)ನಾಲೆ ಅಥವಾ ಕಾಲುದಾರಿಯು ಒಬ್ಬ ವ್ಯಕ್ತಿಯ ಖಾಸಗಿ ಭೂಮಿಯನ್ನು ಎರಡಾಗಿ ವಿಭಜಿಸಿದರೆ ಮತ್ತು ಅದನ್ನು ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಅಂಥ ಭೂಮಿಯ ಮೇರೆಯ ಉದ್ದಕ್ಕೂ ತಿರುಗಿಸಬಹುದಾದರೆ;

ಅದರಂತೆ, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ನೆಲ್ಲೂರು ಗ್ರಾಮದ ಸ ನಂ 102 ರಲ್ಲಿ 3-33 ಎಕರೆ ಜಮೀನಿನ ಮೇಲ್ಭಾಗದಲ್ಲಿ ಗ್ರಾಮನಕಾಶೆಯಂತೆ ಇಂದಾವರ-ನಲ್ಲೂರು ಗ್ರಾಮದ ಗಡಿ ಹೊಂದಿಕೊಂಡಿರುವ ಹದ್ದಿಗಿಡದ ಹಳ್ಳವು ಭೌತಿಕವಾಗಿ ಪ್ರಸ್ತುತ ಬಳಕೆಯಲ್ಲಿ ಇಲ್ಲದೇ ಇರುವುದರಿಂದ ಹಾಗೂ ಪ್ರಸ್ತುತ ಜಮೀನಿನ ಕೆಳಭಾಗದಲ್ಲಿ ಭೌತಿಕವಾಗಿ ಹದ್ದಿಗಿಡದ ಹಳ್ಳವು ಬಳಕೆಯಲ್ಲಿದ್ದು, ಈ ಬಳಕೆಯಲ್ಲಿರುವ 0-15 ಗುಂಟೆ ಹಾಗೂ ಖಾತೆದಾರರು ಪಥಬದಲಾವಣೆ ಸಂಬಂಧ ಬಿಟ್ಟುಕೊಡಲು ಒಪ್ಪಿರುವ 0-35 ಗುಂಟೆ ಈ ರೀತಿ ಒಟ್ಟು 1-10 ಎಕರೆ ಹಿಡುವಳಿ ಜಮೀನನ್ನು ಸರ್ಕಾರಕ್ಕೆ ಹಸ್ತಾಂತರಿಸಿಕೊಂಡು ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-68(1) ರಿಂದ 68(5)ರವರೆಗಿನಂತೆ ಕ್ರಮವಹಿಸಿ ಸಾರ್ವಜನಿಕ ಹಕ್ಕಿನಿಂದ ವಿರಹಿತಗೊಳಿಸುವ ಕುರಿತು ಹೊರಡಿಸಲಾದ **ಸಾರ್ವಜನಿಕ ನೋಟಿಸನ್ನು** ಸಂಬಂಧಪಟ್ಟ ಗ್ರಾಮಚಾವಡಿ, ಗ್ರಾಮ ಪಂಚಾಯಿತಿ, ನಾಡಕಚೇರಿ, ತಾಲ್ಲೂಕು ಆಡಳಿತ ಸೌಧದಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಲಾಗಿದ್ದು, ಸಾರ್ವಜನಿಕ ಪ್ರಕಟಣೆಯನ್ನು ಪ್ರಚುರಪಡಿಸಿದ ದಿನಾಂಕದಿಂದ 90 ದಿವಸಗಳ ಅವಧಿಯೊಳಗೆ ಯಾವುದೇ ತಕರಾರು/ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲವೆಂದು ದಿನಾಂಕ:09-06-2026 ಉಲ್ಲೇಖ(3)ರ ಪತ್ರದಲ್ಲಿ ತಹಶೀಲ್ದಾರ್, ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರುರವರು ವರದಿಸಿದ್ದು,

ಅದರಂತೆ, ಸಾರ್ವಜನಿಕ ನೋಟಿಸ್ ಹೊರಡಿಸಿದ ನಂತರದಲ್ಲಿ ನಿಗಧಿತ ಅವಧಿಯೊಳಗೆ ಪ್ರಸ್ತಾಪಿತ ಜಮೀನಿನಲ್ಲಿರುವ ಹದ್ದಿಗಿಡದ ಹಳ್ಳದ ಪಥ ಬದಲಾವಣೆ ಸಂಬಂಧ ಯಾವುದೇ ಆಕ್ಷೇಪಣೆಗಳು ಸಾರ್ವಜನಿಕರಿಂದ ಈ ಕಚೇರಿಗೆ ಸ್ವೀಕೃತವಾಗಿರುವುದು ಕಂಡು ಬಂದಿರುವುದಿಲ್ಲ.

ಆದ್ದರಿಂದ, ಸ್ಥಳೀಯ ಅಧಿಕಾರಿಗಳ ಪ್ರಸ್ತಾವನೆಯನ್ನು ಕರ್ನಾಟಕ ಭೂಮಂಜೂರಾತಿ ನಿಯಮಗಳಡಿ ಪರಿಶೀಲಿಸಿ, ಉಲ್ಲೇಖ(1)ರ ಪತ್ರದಲ್ಲಿ ಸರ್ಕಾರವು ಪೂರ್ವಾನುಮತಿಯನ್ನು ನೀಡಿರುವಂತೆ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ

ಸಂಖ್ಯೆ: DCCKM-REV0LCKM/489/2024-REV-DC CHIKKAMAGALURU(E-606251), ದಿನಾಂಕ:21-07-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸ್ಥಳೀಯ ಅಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆ ಯನ್ನು ಭೂಮಂಜೂರಿ ನಿಯಮಗಳಡಿ ಪರಿಶೀಲಿಸಿ, ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಇಂದಾವರ-ನೆಲ್ಲೂರು ಗ್ರಾಮದ ಗಡಿಗೆ ಹೊಂದಿಕೊಂಡಿರುವ ಒಟ್ಟು 1-10 ಎಕರೆ "ಬಿ" ಖರಾಬು ಹದ್ದಿಗಿಡದ ಹಳ್ಳವನ್ನು ಕರ್ನಾಟಕ ಭೂಕಂದಾಯ ಕಾಯ್ದೆ-1964 ರ ಕಲಂ-68(1) ರಿಂದ 68(5)ರವರೆಗಿನಂತೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಎಲ್ಲಾ ಹಕ್ಕುಗಳು ಅಳಿದು ಹೋಗಿದೆಯೆಂದು ಸಾರ್ವಜನಿಕ ಹಕ್ಕಿನಿಂದ ವಿರಹಿತಗೊಳಿಸಿ, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ನೆಲ್ಲೂರು ಗ್ರಾಮದ ಸ ನಂ 102 ರಲ್ಲಿ 03-33 ಎಕರೆ ಹಿಡುವಳಿ ಜಮೀನಿನ ಕೆಳಭಾಗದ 1-10 ಎಕರೆ ಪ್ರದೇಶವನ್ನು ಹದ್ದಿಗಿಡದ ಹಳ್ಳಕ್ಕೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು-1969 ರ ನಿಯಮ-28(ಎ)ರಡಿ ಪಥ ಬದಲಾವಣೆ ಮಾಡಿ ಆದೇಶಿಸಿದೆ.

ಸೂಚನೆಗಳು:-

1. ಈ ಆದೇಶದಂತೆ ಪ್ರಸ್ತಾಪಿತ 1-10 ಎಕರೆ ಹದ್ದಿಗಿಡದ ಹಳ್ಳದ ಪ್ರದೇಶವನ್ನು ಸರ್ವೆ ದಾಖಲೆಗಳಲ್ಲಿ ಹಾಗೂ ಗ್ರಾಮನಕಾಶೆಯಲ್ಲಿ ಗುರುತಿಸಿ ಕರ್ನಾಟಕ ಭೂಕಂದಾಯ ನಿಯಮಗಳು-1966 ರ ನಿಯಮ-73 ರಂತೆ ಇಂಡೀಕರಿಸಲು ಭೂದಾಖಲೆಗಳ ಉಪನಿರ್ದೇಶಕರು, ಚಿಕ್ಕಮಗಳೂರು ಇವರಿಗೆ ಸೂಚಿಸಿದೆ.
2. ಈ ಆದೇಶದಂತೆ, ಪ್ರಸ್ತಾಪಿತ ಜಮೀನುಗಳ ವಿನ್ಯಾಸನಕ್ಷೆ, ಅನುಮೋದಿಸುವ ವೇಳೆ 1-10 ಗುಂಟೆ ಪ್ರದೇಶದ ಹದ್ದಿಗಿಡದ ಹಳ್ಳವನ್ನು ವಿನ್ಯಾಸ ನಕ್ಷೆಯಲ್ಲಿ ಗುರುತಿಸಲು ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು ರವರಿಗೆ ಸೂಚಿಸಿದೆ.
3. ಅಲ್ಲದೇ, ಪ್ರಸ್ತಾಪಿತ ಜಮೀನಿನ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ ಈ ಆದೇಶವು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
4. ಈ ಆದೇಶದಂತೆ ಪಥಬದಲಾವಣೆ ಮಾಡಿರುವ ಹದ್ದಿಗಿಡದ ಹಳ್ಳದ ಪ್ರದೇಶವನ್ನು ಯಾವುದೇ ರೀತಿಯಲ್ಲಿ ಒತ್ತುವರಿಯಾಗದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದೆ.

ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

PR-128

ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ
ಉಡುಪಿ ಜಿಲ್ಲೆ, "ರಜತಾದ್ರಿ"
ಮಣಿಪಾಲ, ಉಡುಪಿ – 576104
Email: udupidc@gmail.com

(ಕಂದಾಯ ಇಲಾಖೆ)

Deputy Commissioner &
District Magistrate's Office,
Udupi District, " Rajatadri",
Manipal, Udupi - 576104
Office: 0820-2574924, 2574925

ಸಂ: ಗಭೂಇ/ಹಿಭೂ(ಉಡುಪಿ)/ NON CRZ /ಮ.ಬ್ಲಾ./ಅಧಿಸೂಚನೆ/2026-27 ದಿನಾಂಕ: 05-08-2026

ಅಧಿಸೂಚನೆ

ವಿಷಯ ಹೊಸ ಮರಳು ನೀತಿ 2020 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021 & 2023 ರನ್ವಯ ಉಡುಪಿ ಜಿಲ್ಲಾ ವ್ಯಾಪ್ತಿಯ IV, V & VI ನೇ ಶ್ರೇಣಿಯ ನದಿಗಳ ವ್ಯಾಪ್ತಿಯಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳನ್ನು ಸರ್ಕಾರಿ ಇಲಾಖೆಗಳಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸುವ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಸಿಐ 344 ಎಂಎಂಎನ್ 2019, ಬೆಂಗಳೂರು, ದಿನಾಂಕ: 05.05.2020.

2. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021, 2023 & 2024.
3. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರ ಪತ್ರ ಸಂಖ್ಯೆ: ಕಾಅ/ಕೆಆರ್ಐಡಿಎಲ್/ ಉಡುಪಿ/ಮರಳು/2026-27/442, ದಿನಾಂಕ: 25.06.2026.
4. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರ ಪತ್ರ ಸಂಖ್ಯೆ: ಕಾಅ/ಕೆಆರ್ಐಡಿಎಲ್/ಉಡುಪಿ/ಮರಳು/2026-27/437, ದಿನಾಂಕ: 25.06.2026.
5. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಉಡುಪಿ ರವರ ಪತ್ರ ಸಂಖ್ಯೆ: ಕಾಅ/ಕೆಆರ್ಐಡಿಎಲ್/ಉಡುಪಿ/ಕಾಮಗಾರಿ/2026-27/126, ದಿನಾಂಕ: 07.05.2026.
6. GM (T) & Project Director, NHAI-PIU- Mangalore ರವರ ಪತ್ರ ಸಂಖ್ಯೆ: 11033/04/2026/PIU (Mnglr)/121, ದಿನಾಂಕ: 28.04.2026.
7. ದಿನಾಂಕ: 15.07.2026 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿಯಂತೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ವ್ಯಾಪ್ತಿಯ IV, V & VI ನೇ ಶ್ರೇಣಿಯ ನದಿಗಳ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್‌ಗಳನ್ನು ಹೊಸ ಮರಳು ನೀತಿ 2020 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021, 2023 & 2024 ರ ನಿಯಮ 31-ZB ರಂತೆ ನಾನ್ ಸಿ.ಆರ್.ಝಡ್ ವ್ಯಾಪ್ತಿಯ IV, V & VI ನೇ ಶ್ರೇಣಿಯ ನದಿಗಳಲ್ಲಿನ ಮರಳು ಬ್ಲಾಕ್‌ಗಳನ್ನು ಸರ್ಕಾರಿ/ ಅಭಿವೃದ್ಧಿ ಕಾಮಗಾರಿಗಳಿಗಾಗಿ ಸರ್ಕಾರಿ ಸ್ವಾಮ್ಯದ ಇಲಾಖೆ, ಸಂಸ್ಥೆ/ ನಿಗಮ/ ಮಂಡಳಿಗಳಿಗೆ ಮೀಸಲಿರಿಸಬಹುದಾಗಿರುತ್ತದೆ.

ಮುಂದುವರೆದು ಹೊಸ ಮರಳು ನೀತಿ 2020 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021 ರ ನಿಯಮ 31-U(4) ರಲ್ಲಿ "The District sand committee shall issue letter of intent to the concerned Government department or Government owned Corporation or Board or for the purpose of the Central Government or the State Government development work in the manner provided in sub-rule (13)" ಎಂಬುದಾಗಿ ತಿಳಿಸಲಾಗಿದ್ದು, ದಿನಾಂಕ: 03.12.2024 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ

ಸಮಿತಿ ಸಭೆಯಲ್ಲಿ ಸರ್ಕಾರಿ ಇಲಾಖೆಗಳಿಗೆ ಮೀಸಲಿರಿಸುವ ಮರಳು ಬ್ಲಾಕ್‌ಗಳಲ್ಲಿ ಲಭ್ಯವಿರುವ ಮರಳಿನ ಪ್ರಮಾಣದಲ್ಲಿ ಶೇ. 75 ರಷ್ಟು ಪ್ರಮಾಣದ ಮರಳನ್ನು ಸರ್ಕಾರಿ ಕಾಮಗಾರಿಗಾಗಿ ಹಾಗೂ ಶೇ. 25 ರಷ್ಟು ಮರಳಿನ ಪ್ರಮಾಣವನ್ನು ಸಾರ್ವಜನಿಕರಿಗೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಪೂರೈಸುವ ಷರತ್ತಿಗೊಳಪಟ್ಟು ಆಶಯ ಪತ್ರವನ್ನು ನೀಡಲು ತೀರ್ಮಾನಿಸಲಾಗಿರುತ್ತದೆ ಹಾಗೂ ದಿನಾಂಕ: 16.01.2024 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ಈ ಕೆಳಕಂಡ ಮರಳು ಬ್ಲಾಕ್ಗಳನ್ನು ಅನುಮೋದಿಸಲಾಗಿದ್ದು, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 31-ZC ರಂತೆ ಸದರಿ ಮರಳು ಬ್ಲಾಕ್‌ಗಳಲ್ಲಿ ಮಾನವ ಶ್ರಮದಿಂದ ಮರಳು ತೆಗೆಯುವ ಸಾಂಪ್ರದಾಯಿಕ ಸಮುದಾಯಕ್ಕೆ ಟೆಂಡರ್ ಕರೆಯುವ ಸಂಬಂಧ ಅಥವಾ ಸರ್ಕಾರಿ ಇಲಾಖೆ/ ಸಂಸ್ಥೆ/ ನಿಗಮ/ ಮಂಡಳಿಯಿಂದ ಮರಳು ಬ್ಲಾಕ್‌ನ ವಿವರಗಳೊಂದಿಗೆ ಸ್ಪಷ್ಟವಾದ ಬೇಡಿಕೆ ಪತ್ರವನ್ನು ನೀಡಿದಲ್ಲಿ, ಸದರಿ ಬೇಡಿಕೆ ಪತ್ರವನ್ನು ಪರಿಗಣಿಸಿ ಅಧಿಸೂಚನೆ ಹೊರಡಿಸಿ ಮುಂದಿನ ಕ್ರಮವಹಿಸಲು ತೀರ್ಮಾನಿಸಲಾಗಿರುತ್ತದೆ.

ಅದರಂತೆ ಉಲ್ಲೇಖಿತ (3), (4), (5) & (6) ರ ಪತ್ರದಲ್ಲಿ ಈ ಕೆಳಕಂಡ ಮರಳು ಬ್ಲಾಕ್ ಗಳಿಗೆ ಸರ್ಕಾರಿ ಇಲಾಖೆ/ ನಿಗಮಗಳಿಂದ ಬೇಡಿಕೆ ಪತ್ರ ಸ್ವೀಕೃತವಾಗಿದ್ದು, ದಿನಾಂಕ: 15.07.2026 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ಣಯದನ್ವಯ ಸದರಿ ಮರಳು ಬ್ಲಾಕ್ ಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸಿದೆ.

ಕ್ರ. ಸಂ	ಮರಳು ಬ್ಲಾಕ್ ಸಂಖ್ಯೆ	ತಾಲೂಕು	ಗ್ರಾಮ	ಸ.ನಂ	ವಿಸ್ತೀರ್ಣ (ಎಕರೆ)	ನದಿ	ಪ್ರಮಾಣ (ಮೆ.ಟನ್)	ಇಲಾಖೆ/ ನಿಗಮ
1	SB-57	ಕುಂದಾಪುರ	ಸೇನಾಪುರ	91/*	10.5	ಸೌಪರ್ಣಿಕ	73,070	ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್, ಉಡುಪಿ
2	SB-58	ಕುಂದಾಪುರ	ತ್ರಾಸಿ	192/*	5.50	ಸೌಪರ್ಣಿಕ	38,275	
3	SB-59	ಕುಂದಾಪುರ	ತ್ರಾಸಿ	192/*	7.00	ಸೌಪರ್ಣಿಕ	48714	
4	SB-60	ಕುಂದಾಪುರ	ಮೊಳಹಳ್ಳಿ	249/*	3.00	ಹಾಲಾಡಿ	20,877	GM (T) & Project Director, NHAI-PIU- Mangalore
5	SB-61	ಕುಂದಾಪುರ	ಮೊಳಹಳ್ಳಿ	249/*	2.50	ಹಾಲಾಡಿ	17,398	
6	SB-62	ಕುಂದಾಪುರ	ಜಪ್ತಿ	174	2.00	ಹಾಲಾಡಿ	13,904	
ಒಟ್ಟು							2,12,238	

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

ಷರತ್ತುಗಳು:

1. ಉಲ್ಲೇಖ (1) ಮತ್ತು (2) ರ ಸರ್ಕಾರದ ಆದೇಶದನ್ವಯ ಕ್ರಮವಹಿಸುವುದು.
2. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ಅಧ್ಯಾಯ II-A ಮತ್ತು ಅಧ್ಯಾಯ IV-B ರಲ್ಲಿರುವ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಹೊರಡಿಸಿರುವ Sustainable Sand Mining Guidelines, 2016 & Enforcement and monitoring guidelines, 2020 ರಂತೆ ಮರಳು ಗಣಿಗಾರಿಕೆ ನಿರ್ವಹಿಸುವುದು.
3. ಮರಳು ಗಣಿ ಗುತ್ತಿಗೆಯ ವರ್ಗಾವಣೆಯನ್ನು ನಿಷೇಧಿಸಲಾಗಿರುತ್ತದೆ.
4. ಯಾಂತ್ರಿಕ ದೋಣಿಗಳು ಮತ್ತು ಡ್ರೆಜ್ಜಿಂಗ್ ಯಂತ್ರಗಳ ಬಳಕೆಯನ್ನು ನಿಷೇಧಿಸಿದೆ.
5. ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ರಾಜಧನ ಹಾಗೂ ಅನ್ವಯವಾಗುವ ಇತರೆ ಶುಲ್ಕಗಳನ್ನು ಪಾವತಿಸಿ, ವಿಶೇಷ ರಕ್ಷಣಾತ್ಮಕವುಳ್ಳ ಪರವಾನಿಗೆ ಹಾಳೆ (Special Security Permit Papers) ಗಳಲ್ಲಿ ಮರಳು ಸಾಗಾಣಿಕೆ ಪರವಾನಿಗೆಯನ್ನು ಮುದ್ರಿಸಿ ಗ್ರಾಹಕರಿಗೆ ನೀಡುವುದು.

(ಸ್ವರೂಪ ಟಿ.ಕೆ, ಭಾ.ಆ.ಸೇ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

PR-129

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

P S BASAVARAJU